ಏನೆಂದರೆ, ಅಲ್ಲಿ ಹೋಗಿ ಬರತಕ್ಕಂಥ ಸಂಚಾರದ ವ್ಯವಸ್ಥೆ ಸಮರ್ಪಕವಾಗಿ ಇಲ್ಲ. ಆದುದರಿಂದ ವಾಯುದೂತದ ಸರ್ವೀಸ್ ಆದಷ್ಟು ಬೇಗ ಮಾಡಬೇಕೆಂದು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ಕಾಂತಾರವರು ಹೇಳಿದಂತೆ ಅಲ್ಲಿರತಕ್ಕ ದರ್ಗ ಆಗಲಿ, ಮತ್ತು ಬೇರೆ ರೀತಿಯ ಮಸೀದಿಯಾಗಲಿ, ಇನ್ನು ಕೆಲವು ಸ್ಥಳಗಳು ಏನು ಇವೆ, ಅವುಗಳನ್ನು ಪಟ್ಟಿ ಮಾಡಿ ನಾವು ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸುತ್ತೇವೆ ಎಂದು ಹೇಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳಪಟ್ಟಿ

ದಾವಣಗೆರೆ ನಗರಕ್ಕೆ ಟೆಲಿಪ್ರಿಂಟರ್ ವ್ಯವಸ್ಥೆ

೧೪೩ (೩೭೮) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ದಾವಣಗೆರೆ ನಗರವು ಸುಮಾರು ಮೂರು ಲಕ್ಷ ಜನ ಸಂಖ್ಯೆ ಹೊಂದಿರುವ ನಗರವಾಗಿದ್ದು ಸುಮಾರು ಏಳೆಂಟು ದಿನ ಪತ್ರಿಕೆಗಳು ಹೊರಡುತ್ತಿರುವುದರಿಂದ ಅಲ್ಲಿಗೆ ಟೆಲಿಪ್ರಿಂಟರ್ ವ್ಯವಸ್ಥೆಯನ್ನು ಮಾಡಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಸರ್ಕಾರದ ನೀತಿಯಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಟೆಲಿಪ್ರಿಂಟರ್ ಸೌಲಭ್ಯವನ್ನು ಜಿಲ್ಲಾ ವಾರ್ತಾ ಹಾಗೂ ಪ್ರಚಾರಾಧಿಕಾರಿಗಳ ಕಛೇರಿಗಳಲ್ಲಿ ಒದಗಿಸಲಾಗಿದೆ. ಬೃಹತ್ ನಗರ ಪಟ್ಟಣಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಸದ್ಯಕ್ಕೆ ಉದ್ದೇಶಿಸಿಲ್ಲ.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಬಿ. ರಾಚಯ್ಯ.—(ಮಾನ್ಯ ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹೊನ್ನಾಳಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಬಗ್ಗೆ

೧೬೦ (೪೦೨) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೊನ್ನಾಳಿಯಲ್ಲಿ ಈಗ ಹಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯನ್ನು ಸಾರ್ವತ್ರಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸರ್ಕಾರದವರಿಗೆ ಇರುವ ತೊಂದರೆಗಳೇನು ?

ಆ) ಸರ್ಕಾರದವರು ಕೇಳುವ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುವುದೇ ?

ಇ) ಹಾಗಿದ್ದಲ್ಲಿ, ೧೯೮೬-೮೭ ರ ವರ್ಷದಲ್ಲಾದರೂ ಸಾರ್ವಜನಿಕ ಆಸ್ಪತ್ರೆಯನ್ನು ಸರ್ಕಾರದವರು ಮಂಜೂರು ಮಾಡುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಹೊನ್ನಾಳಿಯು ಒಂದು ತಾಲ್ಲೂಕು ಕೇಂದ್ರವಾಗಿದ್ದು ಸರ್ಕಾರದ ನೀತಿಯಂತೆ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬಹುದಾಗಿದೆ. ಆದರೆ ರಾಜ್ಯದಲ್ಲಿ ಈ ರೀತಿ ಮೇಲ್ದರ್ಜೆಗೇರಿಸಬೇಕಾದ ಇನ್ನೂ ಅನೇಕ ಆಸ್ಪತ್ರೆಗಳಿವೆ. ಯೋಜನಾ ವೆಚ್ಚದ ಮಿತಿಯಿಂದ ಇವುಗಳನ್ನು ಹಂತಹಂತವಾಗಿ ಪರಿಗಣಿಸಲಾಗುವುದು.

ಆ) ಪರಿಶೀಲಿಸಲಾಗುವುದು.